# ಸ್ಯಾನ್ ಫ್ರಾನ್ಸಿಸ್ಕೋ ವೇದಾಂತ ಸಂಘದ

## *ಸಾರ್ಥಕ ಶತಮಾನೋತ್ಸವ*

ಡಾ. ಪ್ರಭುಶಂಕರ

**ಸ್ವಾಮಿ ವಿವೇಕಾನಂದರಿಂದ ಸ್ಥಾಪಿತವಾದ ಸ್ಯಾನ್ ಫ್ರಾನ್ಸಿಸ್ಕೋ ವೇದಾಂತ ಸಂಘವು ಇದೇ ವರ್ಷ ಮೇ ತಿಂಗಳಲ್ಲಿ ಶತಮಾನೋತ್ಸವವನ್ನು ಆಚರಿಸಿತು. ಆ ಕೇಂದ್ರವು ನಡೆದು ಬಂದ ದಾರಿಯ ಸ್ವಾರಸ್ಯಕರ ವಿವರಣೆಯನ್ನು ನೀಡಿದ್ದಾರೆ ಕನ್ನಡದ ಹೆಸರಾಂತ ಸಾಹಿತಿಗಳಾದ ಡಾ.ಪ್ರಭುಶಂಕರ ಅವರು.**

ಸ್ವಾಮಿ ವಿವೇಕಾನಂದರು ಪಶ್ಚಿಮ ದೇಶಗಳಿಗೆ— ಅವರಲ್ಲೂ ಮುಖ್ಯವಾಗಿ ಅಮೆರಿಕಾ ಸಂಯುಕ್ತ ಸಂಸ್ಥಾನಗಳಿಗೆ ಹೋದದ್ದು ಅವಳಿ ಉದ್ದೇಶಗಳಿಂದ : ಮೊದಲನೆಯದು ಭಾರತವು ಅನೇಕಾನೇಕ ಶತಮಾನಗಳ ಕಾಲ ಕಠಿಣವಾದ ತಪಸ್ಸಿನಿಂದ ಸಂಚಯಿಸಿದ ಆಧ್ಯಾತ್ಮಿಕ ಸಂಪತ್ತನ್ನು ಪಾಶ್ಚಾತ್ಯರಿಗೆ ಪರಿಚಯಿಸುವುದು; ಎರಡನೆಯದು ಹಾಗೆ ನೀಡಿದ ಸಂಪತ್ತಿಗೆ ವಿನಿಮಯವಾಗಿ, ಆ ಸಂಪದ್ಭರಿತ ರಾಷ್ಟ್ರಗಳಿಂದ ಭಾರತಕ್ಕೆ ಹಣ ತಂದು ಸಾಧ್ಯವಾದ ಮಟ್ಟಿಗೂ ಈ ದೇಶದ ಬಡತನವನ್ನು ನೀಗುವುದು. ಸ್ವಭಾವತಃ ನಿಸ್ಪೃಹರೂ, ಲೌಕಿಕ ವ್ಯವಹಾರಗಳ ವಿಷಯದಲ್ಲಿ ಮುಗ್ಧರೂ ಆಗಿದ್ದ ಸ್ವಾಮೀಜಿ ತಮ್ಮ ಅವಳಿ ಉದ್ದೇಶಗಳಲ್ಲಿ ಎರಡನೆಯದನ್ನು ಸಾಧಿಸುವುದರಲ್ಲಿ ವಿಫಲರಾದರು. ಆದರೆ ಅವರ ಮೊದಲನೆಯ ಉದ್ದೇಶ ಗಣನೀಯವಾದ ಪ್ರಮಾಣದಲ್ಲಿ ಸಾಧಿತವಾಯಿತು.

ತಮ್ಮ ಪ್ರಭಾವಶಾಲೀ ಭಾಷಣಗಳಿಂದಲೂ ಬರಹಗಳಿಂದಲೂ ಸ್ವಾಮೀಜಿ ಅಮೆರಿಕದಲ್ಲಿ ಮೊದಲ ಬಾರಿಗೆ ವೇದಾಂತವನ್ನು ಜನರ ಕಣ್ಣು ಕೋರೈಸುವಂತೆ ತೆರೆದಿಟ್ಟು, ಅಲ್ಪಪ್ರಮಾಣದಲ್ಲಿಯೋ ಮಹತ್ಪ್ರಮಾಣದಲ್ಲಿಯೋ ಆಧ್ಯಾತ್ಮಿಕ ಸಿದ್ಧತೆಯನ್ನು ಪಡೆದಿದ್ದ ಜನರು ಅದನ್ನು ತಮ್ಮ ಜೀವನ ವಿಧಾನವನ್ನಾಗಿ ಸ್ವೀಕರಿಸುವಂತೆ ಮಾಡುವುದರಲ್ಲಿ ಯಶಸ್ವಿಯಾದರು. ಆದರೂ ನಿಜವಾದ ಆಧ್ಯಾತ್ಮಿಕ ಜೀವನವನ್ನು ನಡೆಸುವ ತ್ಯಾಗ, ವೈರಾಗ್ಯಗಳ ಜೀವಂತ ಪ್ರತೀಕವಾಗಿರುವ ಸಾಧುಗಳು ಸಾಧಕರ ಕಣ್ಣಮುಂದೆ ಇರಬೇಕಾದದ್ದು ಆವಶ್ಯಕ ಎಂಬುದು ಸ್ವಾಮೀಜಿಯವರ ಅಂತರ್ದೃಷ್ಟಿಗೆ ಗೋಚರಿಸಿತು. ಈ ಉದ್ದೇಶದಿಂದ **ಸ್ವಾಮಿ ವಿವೇಕಾನಂದರು ಮೊದಲ ವೇದಾಂತ ಸಂಘವನ್ನು ಅಮೆರಿಕಾ ದೇಶದ ಸ್ಯಾನ್ ಫ್ರಾನ್ಸಿಸ್ಕೋ ಪಟ್ಟಣದಲ್ಲಿ ಕ್ರಿ.ಶ. ೧೯೦೦ರಲ್ಲಿ ಸ್ಥಾಪಿಸಿದರು.**

೧೯೦೦ನೆ ಇಸವಿಯಲ್ಲಿ ಸ್ವಾಮೀಜಿ ಸ್ಯಾನ್ ಫ್ರಾನ್ಸಿಸ್ಕೋದಲ್ಲಿ ಅನೇಕ ಉಪನ್ಯಾಸಗಳನ್ನು ನೀಡಿದರು. ಅವರ ಉಪನ್ಯಾಸಗಳಿಂದ ಅನೇಕರು ವೇದಾಂತದ ಕಡೆಗೆ ಆಕರ್ಷಿತರಾದರು. ಅದೇ ವರ್ಷದ ಏಪ್ರಿಲ್ ೧೪ರಂದು ಸ್ವಾಮೀಜಿ ತಮ್ಮ ಕೊನೆಯ ಸಾರ್ವಜನಿಕ ಉಪನ್ಯಾಸವನ್ನು ನೀಡಿದರು. ಅವರಲ್ಲಿ ಭಕ್ತಿ ಎನ್ನುವಷ್ಟರ ಮಟ್ಟಿನ ಮೆಚ್ಚುಗೆಯನ್ನು ತಾಳಿದ್ದ ಕೆಲವು ಶ್ರೋತೃಗಳು ಸ್ವಾಮೀಜಿಯವರಿಗೆ ಒಂದು ಸಲಹೆ ನೀಡಿದರು: ವೇದಾಂತದ ಅಧ್ಯಯನವನ್ನು ಮುಂದುವರಿಸಲು ಒಂದು ಸಂಘ ಸ್ಥಾಪನೆಯಾಗಬೇಕು. ಸ್ವಾಮೀಜಿಯವರಿಗೆ ಆ ಸಲಹೆ ತುಂಬ ಹಿಡಿಸಿತು. ತಕ್ಷಣವೇ ಅವರು 'ಏಕಾಗಬಾರದು' ಎಂದು ಉದ್ಗರಿಸಿದರು. 'ಇಲ್ಲೇ ಈಗಲೇ ಅಂಥದೊಂದನ್ನು ಸ್ಥಾಪಿಸಿ' ಎಂದರು. ಸಭಾಂಗಣದ ಪಕ್ಕದಲ್ಲೇ ಇದ್ದ ಒಂದು ಕೊಠಡಿಗೆ ಅವರೂ ಕೆಲವರು ಮಿತ್ರರೂ ಹೋದರು. ಅಲ್ಲೇ ಮೊದಲ ಸಭೆ ನಡೆಯಿತು. ಸಭೆಯ ನಡಾವಳಿಯಲ್ಲಿ ದಾಖಲಾಗಿರುವಂತೆ ತಾವು ಸ್ಥಾಪಿಸಲಿರುವ ಸಂಘದ ಉದ್ದೇಶಗಳು ಎರಡು : **'ಭಾರತದಲ್ಲಿ ಸ್ವಾಮಿ ವಿವೇಕಾನಂದರು ನಡೆಸಲಿರುವ ಕಾರ್ಯ ಚಟುವಟಿಕೆಗಳಿಗೆ ನೆರವಾಗುವುದು ಮತ್ತು ವೇದಾಂತ ದರ್ಶನವನ್ನು ಅಧ್ಯಯನ ಮಾಡುವುದು.'**

ಸ್ವಾಮಿ ವಿವೇಕಾನಂದರು ಅಲ್ಲಿಂದ ತೆರಳಿದ ಮೇಲೆ ಶ್ರೀರಾಮಕೃಷ್ಣ ಪರಮಹಂಸರ ನೇರ ಶಿಷ್ಯರಾದ ಸ್ವಾಮಿ ತುರೀಯಾನಂದರು ಅಲ್ಲಿಗೆ ಬಂದರು. ಅವರು ಒಂದೆರಡು ತಿಂಗಳು ವಾರಕ್ಕೆ ಮೂರರಂತೆ ತರಗತಿಗಳನ್ನು ನಡೆಸಿ ಸಮೀಪದ 'ಶಾಂತಿ ಆಶ್ರಮ'ಕ್ಕೆ ಎಂಟು ಜನ ವೇದಾಂತ ವಿದ್ಯಾರ್ಥಿಗಳೊಂದಿಗೆ ಹೊರಟು ಹೋದರು.

ಒಂದು ವರ್ಷ 'ಶಾಂತಿ ಆಶ್ರಮ' ಮತ್ತು ವೇದಾಂತ ಸಂಘದ ನಡುವೆ ಓಡಾಡಿ ಎರಡನ್ನೂ ನೋಡಿಕೊಳ್ಳುತ್ತಿದ್ದ ಸ್ವಾಮಿ ತುರೀಯಾನಂದರ ಆರೋಗ್ಯ ಒಂದೂವರೆ ವರ್ಷದಲ್ಲಿ ತೀರ ಹದಗೆಟ್ಟಿತು. ಸ್ವಾಮಿ ವಿವೇಕಾನಂದರು ಕಳವಳಗೊಂಡು ಅವರನ್ನು ಭಾರತಕ್ಕೆ ಹಿಂದಿರುಗಲು ಹೇಳಿದರು. ೧೯೦೨ರ ಜೂನ್ ೬ರಂದು ಸ್ವಾಮಿ ತುರೀಯಾನಂದರು ಭಾರತಕ್ಕೆ ಹೊರಟರು. ಅವರ ಸ್ಥಾನಕ್ಕೆ ಸ್ಯಾನ್ ಫ್ರಾನ್ಸಿಸ್ಕೋಗೆ ಬಂದವರು ಶ್ರೀರಾಮಕೃಷ್ಣರ ಮತ್ತೊಬ್ಬ ನೇರ ಶಿಷ್ಯರೂ **ಮುಂದೆ ವೇದಾಂತ ಸಂಘದ ಜೀವಜೀವಾಳವೂ, ಆಧಾರ ಸ್ತಂಭವೂ, ಅದರ ಪೂರ್ಣಪ್ರಮಾಣದ ಬೆಳವಣಿಗೆಗೆ ಕಾರಣರೂ ಆದ ಸ್ವಾಮಿ ತ್ರಿಗುಣಾತೀತಾನಂದರು.**

ತ್ರಿಗುಣಾತೀತರ ಸಾಧನೆಗಳು ಅಸಂಖ್ಯಾತ. ಮೊದಲನೆಯದಾಗಿ ಅವರು ವೇದಾಂತ ಸಂಘವನ್ನು ಭದ್ರವಾದ ಬುನಾದಿಯ ಮೇಲೆ ಪುನಾರಚಿಸಿದರು. ಎರಡನೆಯದಾಗಿ ಈ ಸಂಘದ ಅಂಗವಾಗಿ ಹೊರಡುತ್ತಿದ್ದ, ಯಾವುದೋ ಕಾರಣಕ್ಕೆ ತುರೀಯಾನಂದರೂ ಸೇರಿದಂತೆ ಅನೇಕರು ವಿರೋಧಿಸಿದ್ದ ಪತ್ರಿಕೆಯನ್ನು ನಿಲ್ಲಿಸಿದರು. ಮೂರನೆಯದು ಅತ್ಯಂತ ಕ್ರಮಬದ್ಧವಾಗಿ ವೇದಾಂತ ಬೋಧನೆಯನ್ನು ನಡೆಸುತ್ತಾಹೋದರು. ನಾಲ್ಕನೆಯದು ಮತ್ತು ಅತ್ಯಂತ ಮಹತ್ವಪೂರ್ಣವೂ ಸಾಹಸಪೂರ್ಣವೂ ಆದ ಸಾಧನೆ : **ಇಡೀ ಪಶ್ಚಿಮ ಜಗತ್ತಿನಲ್ಲಿ ಸರ್ವಪ್ರಥಮವಾದ ಹಿಂದೂ ದೇವಾಲಯದ ನಿರ್ಮಾಣ.**


ವೇದಾಂತವನ್ನು ಅಧ್ಯಯನ ಮಾಡುತ್ತಿದ್ದವರ ಸಂಖ್ಯೆ ಕೇವಲ ೨೬, ಅದೂ ಶ್ರೀರಾಮಕೃಷ್ಣರ ನೇರ ಶಿಷ್ಯರಾದ ಸ್ವಾಮಿ ತ್ರಿಗುಣಾತೀತರ ಮಾರ್ಗದರ್ಶನದಲ್ಲಿ! ಅವರಲ್ಲಿ ಯಾರೂ, ಒಬ್ಬಿಬ್ಬರನ್ನು ಹೊರತುಪಡಿಸಿದರೆ, ಶ್ರೀಮಂತರಲ್ಲ. ಲೂಯಿ ಮಾರ್ಟಿನ್ ಜಾಲ್ ಎಂಬ ಹೋಟೇಲ್ ಮಾಲಿಕ ಭಕ್ತರ ಒಂದು

ಸಾವಿರ ಡಾಲರ್ ಮತ್ತು ಅವರೇ ಎತ್ತಿದ ಏಳು ಸಾವಿರ ಡಾಲರ್‌ಗಳ ಭರವಸೆಯ ಮೇಲೆ, ಕೊಲ್ಲಿಗೆ ಅತಿಸಮೀಪದಲ್ಲಿ ವೆಬ್‌ಸ್ಟರ್ ಮತ್ತು ಫಿರಬರ್ಟ್ ರಸ್ತೆಗಳ ನೈರುತ್ಯಮೂಲೆಯಲ್ಲಿ ಒಂದು ನಿವೇಶನವನ್ನು ಕೊಳ್ಳಲಾಯಿತು. ಸ್ವಾಮಿ ತ್ರಿಗುಣಾತೀತರಿಗೆ ಅದು ಬರಿ ನೆಲವೂ ಅಲ್ಲ, ಅವರು ಅದರ ಮೇಲೆ ಕಟ್ಟಿದ ದೇವಾಲಯ ಬರಿಯ ಇಟ್ಟಿಗೆ-ಗಾರೆಗಳೂ ಅಲ್ಲ. ಅದು ಅಮೆರಿಕದ ನೆಲದಲ್ಲಿ ಬೇರು ಬಿಟ್ಟ ಭಾರತದ ಪ್ರಾಣಶಕ್ತಿ.

ತ್ರಿಗುಣಾತೀತರ ಈ ದೇವಾಲಯ ನಿರ್ಮಾಣದ ಅಗಾಧ ಯೋಜನೆಗೆ ಹೆದರಿದ ಕೆಲವು ಸದಸ್ಯರು ಸಂಘವನ್ನು ತೊರೆದು ಹೊರಟೇಹೋದರು. ವಿವೇಕಾನಂದರ ಗುರುಭಾಯಿಯಾದ ಈ ಧೀರ ಸಂನ್ಯಾಸಿ ಅದಕ್ಕೆಲ್ಲ ಹೆದರಲೇ ಇಲ್ಲ. ಅವರ ಕಣ್ಣಿನಲ್ಲಿ ಈ ದೇವಾಲಯವು ಪಶ್ಚಿಮದ ಸಂಸ್ಕೃತಿಗೆ ಹರಿದು ಬಂದ ಭಾರತದ ಮಹಾನ್ ಆಧ್ಯಾತ್ಮಿಕ ಪ್ರವಾಹಕ್ಕೆ ಸಂಕೇತವಾಯಿತು. ತಮ್ಮ ಈ ಸಾಹಸದ ಹಿಂದೆ ಸ್ವಾಮಿ ವಿವೇಕಾನಂದರ ಶಕ್ತಿ ಕೆಲಸ ಮಾಡುತ್ತಿದೆ ಎಂದೇ ಅವರು ನಂಬಿದ್ದರು. ಸ್ವಾಮಿ ತುರೀಯಾನಂದರ ಎಲ್ಲ ಶಿಷ್ಯರೂ ತ್ರಿಗುಣಾತೀತರನ್ನು ಬಿಟ್ಟುಹೋದರು. ಇವರು ಮಾತ್ರ ನಿರ್ಭೀತಿಯಿಂದ ಮುಂದುವರಿದರು. ಕಾಸಿಲ್ಲದೆ ಅಂಥ ದುಬಾರಿ ದೇಶದಲ್ಲಿನ ಅತಿ ದುಬಾರಿ ಊರಾದ ಸ್ಯಾನ್ ಫ್ರಾನ್ಸಿಸ್ಕೋ ನಗರದ ಅತ್ಯಂತ ಶ್ರೀಮಂತ ಪ್ರದೇಶದಲ್ಲಿ ನಿವೇಶನ ಪಡೆದು ಭವ್ಯವಾದ ದೇವಾಲಯವನ್ನು ನಿರ್ಮಿಸಿದ ತ್ರಿಗುಣಾತೀತರ ಧೈರ್ಯಸಾಹಸಗಳು ನಿಜಕ್ಕೂ ಅದ್ಭುತವೆಂದೇ ಹೇಳಬೇಕು. ಇಡೀ ಯೋಜನೆಯು ಕಾರ್ಯಗತವಾದದ್ದನ್ನು ಕುರಿತು ಬರೆಯುತ್ತಾ, ಅಂದು ಇದೆಲ್ಲವನ್ನು ಕಂಡಿದ್ದ ಶ್ರೀಮತಿ ಎಡಿತ್ ಅಲನ್ ಬರೆಯುತ್ತಾರೆ :

'ಸ್ವಾಮೀಜಿ (ಸ್ವಾಮಿ ವಿವೇಕಾನಂದರು) ತತ್ತ್ವದರ್ಶನವನ್ನು ನೀಡಿದರು. ತುರೀಯಾನಂದರು ಆದರ್ಶ ಸಂನ್ಯಾಸಿ ಎಂದರೆ ಯಾರು ಎಂಬುದನ್ನು (ತಮ್ಮ ಬದುಕಿನಿಂದ) ತೋರಿಸಿದರು. ಇವರು (ಸ್ವಾಮಿ ತ್ರಿಗುಣಾತೀತರು) ನಿಷ್ಕಾಮಕರ್ಮ ಎಂದರೇನು ಎಂಬುದನ್ನು ಬಾಳಿ ತೋರಿಸಿದರು. ನಾವು ಪಶ್ಚಿಮದವರು ಕಾರ್ಯದಕ್ಷತೆ, ಶಕ್ತಿ, ವ್ಯವಹಾರ ಚಾತುರ್ಯ, ದೂರದೃಷ್ಟಿ, ಸಹಿಷ್ಣುತೆ ಇವುಗಳಲ್ಲಿ ಮುಂದಿದ್ದೇವೆ ಎಂದು ಜಂಬ ಕೊಚ್ಚಿಕೊಳ್ಳುತ್ತಿದ್ದೆವಷ್ಟೆ. ಸ್ವಾಮಿ ತ್ರಿಗುಣಾತೀತರು ಈ ಎಲ್ಲದರಲ್ಲೂ ನಮಗಿಂತ ತುಂಬ ಮುಂದಿದ್ದರು. ಹಿಂದೂ ದೇವಾಲಯವನ್ನು ಕಟ್ಟಿದ ವಾಸ್ತುಶಿಲ್ಪಿ ಲಿಯನಾರ್ಡ್ ಅವರು **"ಈ ಕಟ್ಟಡ ಕಟ್ಟುವ ಕಾಲಕ್ಕೆ ತಮ್ಮಿಂದ ಸ್ವಾಮೀಜಿ ಕಲಿತುದಕ್ಕಿಂತ ತಾವು ಸ್ವಾಮೀಜಿಯಿಂದ ಕಲಿತದ್ದೇ ಹೆಚ್ಚು"**ಎಂದು ಹೇಳಿದ್ದಾರೆ.'

ಕಟ್ಟಡದ ವಿನ್ಯಾಸವೆಲ್ಲ ತ್ರಿಗುಣಾತೀತರೆ ಯೋಜಿಸಿದ್ದು. ದೇವಾಲಯಕ್ಕೆ ಶಿಲಾನ್ಯಾಸ ಮಾಡಿದ್ದು ೧೯೦೫ರ ಆಗಸ್ಟ್ ೨೧ರಂದು. ಅದೇ ವರ್ಷ ಡಿಸೆಂಬರ್‌ನಲ್ಲಿ ಅಷ್ಟು ದೊಡ್ಡ ದೇವಾಲಯದ ಕಟ್ಟಡದ ನಿರ್ಮಾಣ ಮುಗಿದು ಅದರ ನಿವೇದನಾ ಸಮಾರಂಭ ೧೯೦೬ರ ಜನವರಿ ೭ನೇ ತಾರೀಖು ನೆರವೇರಿತು. ವೇದಾಂತ ಸಂಘವೂ ಅದರಲ್ಲೇ ನೆಲೆಗೊಂಡಿತು. ಎಂದರೆ ಸ್ವಾಮಿ ತ್ರಿಗುಣಾತೀತರ ವಾಸವೂ ಅಲ್ಲಿಯೇ. ಅದು ದೇವಾಲಯ ಹಾಗೂ ಮಠ ಎರಡೂ ಆಯಿತು.



ಸ್ಯಾನ್ ಫ್ರಾನ್ಸಿಸ್ಕೋ ನಗರದಲ್ಲಿರುವ ಪಶ್ಚಿಮ ಜಗತ್ತಿನಲ್ಲಿ ಸರ್ವಪ್ರಥಮವಾದ ಹಿಂದೂ ದೇವಾಲಯ

ದೇವಾಲಯದ ನಿವೇದನಾ ಸಮಾರಂಭ ನಡೆದು ಕೇವಲ ಮೂರು ತಿಂಗಳಷ್ಟೇ ಕಳೆದಿತ್ತು. ೧೯೦೬ರ ಏಪ್ರಿಲ್ ೧೮ ಬುಧವಾರ. ಪಂಚ ಪಂಚ ಉಷಃಕಾಲ. ಐದು ಘಂಟೆ ಹೊಡೆದು ಕೆಲವೇ ನಿಮಿಷಗಳೂ ಆಗಿಲ್ಲ. ಇಡೀ ಸ್ಯಾನ್ ಫ್ರಾನ್ಸಿಸ್ಕೋ ನಗರವಷ್ಟೂ ನಲವತ್ತೆಂಟು ಸೆಕೆಂಡುಗಳ ಕಾಲ ಗಡಗಡನೆ ನಡುಗಿತು. ಭಾರೀ ಪ್ರಮಾಣದ ಭೂಕಂಪ ಸಂಭವಿಸಿತ್ತು. ಹಿಂದೂ ದೇವಾಲಯದ ಸುತ್ತಮುತ್ತ ನೂರಾರು ಮನೆಗಳು ನೆಲಸಮವಾದುವು. ಅಷ್ಟೇ ಏನು, 'ಇಡೀ ಸ್ಯಾನ್ ಫ್ರಾನ್ಸಿಸ್ಕೋ ನಾಶವಾಯಿತು' ಎಂದು ತ್ರಿಗುಣಾತೀತರು ಬರೆದಿದ್ದಾರೆ. ಏಕೆಂದರೆ ವಿನಾಶಕಾರಿಯಾಗಿ ಬಂದದ್ದು ಬರೀ ಭೂಕಂಪ ಮಾತ್ರವಲ್ಲ. ಬೆಂಕಿಯ ಜ್ವಾಲೆಗಳು ನಗರವನ್ನೆಲ್ಲ ನುಂಗಿ ನೊಣೆಯತೊಡಗಿದವು. ಈಶಾನ್ಯ ಮಾರುತ ಬೀಸಿ ಬೆಂಕಿಯ ಜ್ವಾಲೆಗಳು ದೇವಾಲಯದ ಕಡೆಗೆ ನುಗ್ಗತೊಡಗಿದುವು. ವೇದಾಂತ ಸಂಘದ ಅನೇಕ ಸದಸ್ಯರು, ವಸತಿಹೀನರಾಗಿ ದೇವಾಲಯದಲ್ಲಿ ಆಶ್ರಯ ಪಡೆದಿದ್ದರು. ಸ್ವಾಮಿ ತ್ರಿಗುಣಾತೀತರು ಧೈರ್ಯದ ಬೆಟ್ಟದಂತಿದ್ದು ಆಶ್ರಿತರನ್ನು ಸಂತೈಸುತ್ತಿದ್ದರು. ಊಟೋಪಚಾರಗಳು ಅಲ್ಲಿಯೇ ನಡೆದುವು. ಬೆಂಕಿ ದೇವಾಲಯವನ್ನು ಆಪೋಶನ ತೆಗೆದುಕೊಳ್ಳುವ ಭಯ ಇದ್ದೇ ಇತ್ತು. ಆದರೆ ಇಪ್ಪತ್ತನೆಯ ತಾರೀಖು, ಶುಕ್ರವಾರ ಬೆಳಗ್ಗೆ ಗಾಳಿ ದಿಕ್ಕನ್ನು ಬದಲಾಯಿಸಿತು. ಪಶ್ಚಿಮದಿಂದ ಬೀಸಿದ ಬಿರುಗಾಳಿ ಅಗ್ನಿಜ್ವಾಲೆಗಳ ದಿಕ್ಕನ್ನು ಉತ್ತರಕ್ಕೂ ಪೂರ್ವಕ್ಕೂ ತಿರುಗಿಸಿತು. ಹಿಂದೂ ದೇವಾಲಯ ಪಾರಾಯಿತು. ಸಂಘದ ನಡಾವಳಿಯಲ್ಲಿ ಇದರ ದಾಖಲೆಯ ಕೊನೆಯಲ್ಲಿ ಈ ಮಾತುಗಳಿವೆ : **'ಜಗನ್ಮಾತೆಯ ಕರುಣೆ ಮತ್ತು ಪ್ರೇಮಗಳು, ಸ್ವಾಮಿ ತ್ರಿಗುಣಾತೀತರ ಮಹಾನ್ ಶ್ರದ್ಧೆ, ಶಕ್ತಿಗಳು ದೇವಾಲಯವನ್ನು ಸ್ವಾಮೀಜಿಯವರಿಗೆ ಉಳಿಸಿ ಕೊಟ್ಟಿತು. ಸಂಘವೂ ಉಳಿದುಕೊಂಡಿತು.'**

೧೯೧೫ರ ಜನವರಿ ೧೦ರಂದು ಸ್ವಾಮಿ ತ್ರಿಗುಣಾತೀತಾನಂದರು ನಿಧನರಾದರು. ಅನಂತರ ಸ್ವಾಮಿ ಪ್ರಕಾಶಾನಂದರು ಸಂಘದ ಮುಖ್ಯಸ್ಥರಾಗಿ ಬಂದರು. ೧೯೨೭ರ ಫೆಬ್ರವರಿ ೧೩ರಂದು ಅವರು



ಶಾಂತಿ ಆಶ್ರಮದ ಒಂದು ಕುಟೀರ

ತೀರಿಕೊಂಡರು. ಹನ್ನೆರಡು ವರ್ಷಗಳ ಕಾಲ ಅವರು ನಿರಂತರವಾಗಿ ದುಡಿದು ಸಂಘವನ್ನು ಬೆಳೆಸಿದರು. ಅನಂತರ ಸ್ವಾಮಿ ದಯಾನಂದರು, ಸ್ವಾಮಿ ಮಾಧವಾನಂದರು ಸ್ವಲ್ಪ ಸ್ವಲ್ಪ ಕಾಲ ಇದ್ದು ಮಾರ್ಗದರ್ಶನ ನೀಡಿದರು. ಒಂದು ವರ್ಷಕಾಲ ಸ್ವಾಮಿ ವಿವಿದಿಶಾನಂದರು ಮುಖ್ಯಸ್ಥರಾಗಿದ್ದರು. ೧೯೩೨ರಲ್ಲಿ ಸ್ವಾಮಿ ಅಶೋಕಾನಂದರು ಮುಖ್ಯಸ್ಥರಾದರು. ಅವರ ಕಾಲದಲ್ಲಿ ಸಂಘದ ಸದಸ್ಯರ ಸಂಖ್ಯೆ ಗಣನೀಯವಾಗಿ ಬೆಳೆಯಿತು. ಬರ್ಕ್ಲಿ ಮತ್ತು ಸ್ಯಾಕ್ರಮೆಂಟೋಗಳಲ್ಲಿ ಎರಡು ಶಾಖಾ ಸಂಘಗಳು ಸ್ಥಾಪಿತವಾದದ್ದು ಅವರ ಕಾಲದಲ್ಲೇ. ಅವರನ್ನು ಸಾಕ್ಷಾತ್ ದೇವತೆಯೆಂದೇ ನಂಬಿದ್ದ ಕೆಲವು ಭಕ್ತರನ್ನು ಈ ಲೇಖಕ ಸಂದರ್ಶಿಸಿದ್ದ. ಅವರು ಡಿಸೆಂಬರ್ ೧೯೬೯ರಲ್ಲಿ ತೀರಿಕೊಂಡರು. ಸ್ವಲ್ಪ ಕಾಲ ಸ್ವಾಮಿ ಶಾಂತಸ್ವರೂಪಾನಂದರು ಸಂಘದ ಮುಖ್ಯಸ್ಥರಾಗಿದ್ದರು. ೧೯೭೦ರಲ್ಲಿ ಕನ್ನಡಿಗರಾದ ಸ್ವಾಮಿ ಪ್ರಬುದ್ಧಾನಂದರು ಸ್ಯಾನ್ ಫ್ರಾನ್ಸಿಸ್ಕೋ ವೇದಾಂತ ಸಂಘದ ನೇತಾರರಾಗಿ ಅಧಿಕಾರ ವಹಿಸಿಕೊಂಡು ಹತ್ತಿರ ಹತ್ತಿರ ಮೂವತ್ತು ವರ್ಷಗಳ ಕಾಲ ಅದರ ಸರ್ವತೋಮುಖವಾದ ಬೆಳವಣಿಗೆಗೆ ಕಾರಣರಾಗಿದ್ದಾರೆ. **ಸಮರ್ಥರೂ ಆಡಳಿತ ದಕ್ಷರೂ ಆದರ್ಶ ಸಂನ್ಯಾಸಿಗಳೂ ಆದ ಸ್ವಾಮಿಗಳ ಪರಂಪರೆಯೆ ಸ್ಯಾನ್ ಫ್ರಾನ್ಸಿಸ್ಕೋ ವೇದಾಂತ ಸಂಘದ ಮಾರ್ಗದರ್ಶನಕ್ಕೆ ದೊರೆತದ್ದು ಅದರ ಅಭಿನಂದನೀಯವಾದ ವಿಕಾಸಕ್ಕೆ ಕಾರಣವಾಯಿತು.**

ಈಗ ಸ್ಯಾನ್ ಫ್ರಾನ್ಸಿಸ್ಕೋ ವೇದಾಂತ ಸಂಘದ ಆಶ್ರಯದಲ್ಲಿರುವ ಕೆಲವು ಸ್ಥಳಗಳ ಮತ್ತು ಅಲ್ಲಿನ ಚಟುವಟಿಕೆಗಳನ್ನು ಕುರಿತಂತೆ ಸಂಕ್ಷೇಪವಾದ ನಿರೂಪಣೆಯನ್ನು ನೀಡಬಹುದು.

ಮೊದಲನೆಯದು ಶಾಂತಿ ಆಶ್ರಮ. ಸ್ಯಾನ್ ಫ್ರಾನ್ಸಿಸ್ಕೋದಿಂದ ಸುಮಾರು ನೂರು ಮೈಲಿ ದೂರದಲ್ಲಿ, ಅಷ್ಟೇನೂ ಆಕರ್ಷಕವಲ್ಲದ ಒಂದು ಗುಡ್ಡದ ಮೇಲಿರುವ ಸ್ಥಳ ಇದು. ಅದರ ವಿಸ್ತೀರ್ಣ ೧೬೦ ಎಕರೆಗಳು. ಸ್ವಾಮಿ ವಿವೇಕಾನಂದರ ಭಕ್ತೆ ಮಿನ್ನೀ ಬೂಕ್ ಎಂಬಾಕೆ, ತಾನು ಸರಕಾರದಿಂದ ಪಡೆದಿದ್ದ ಈ ಭೂಮಿಯನ್ನು ಸ್ವಾಮಿ ವಿವೇಕಾನಂದರಿಗೆ ನೀಡಿದಳು. ಅಲ್ಲಿ ಇರುವುದು ಎರಡು ಪುಟ್ಟ ಕ್ಯಾಬಿನ್‌ಗಳು (ಮರದಿಂದ ಮಾಡಿದ ಗುಡಿಸಲುಗಳು.) ಭಕ್ತೆಯ ಉದ್ದೇಶ ಸ್ವಾಮೀಜಿ ಅಲ್ಲಿ ತಮ್ಮ ಶಿಷ್ಯರಿಗೆ ವೇದಾಂತ ಶಿಬಿರಗಳನ್ನು ನಡೆಸಲಿ ಎಂದು. ಸ್ವಾಮೀಜಿ ಅದನ್ನು ತುರೀಯಾನಂದರಿಗೆ ಕೊಟ್ಟು ವೇದಾಂತವನ್ನು ಅಧ್ಯಯನ ಮಾಡಬಯಸುವ ಭಕ್ತರೊಂದಿಗೆ ಅಲ್ಲಿಗೆ ಹೋಗಿ ಆಶ್ರಮವನ್ನು ಸ್ಥಾಪಿಸುವಂತೆ ಹೇಳಿದರು. ೧೯೦೦ರ ಆಗಸ್ಟ್‌ನಲ್ಲಿ ಸ್ವಾಮಿ ತುರೀಯಾನಂದರು ವೇದಾಂತಾಭ್ಯಾಸಿಗಳೊಂದಿಗೆ ಅಲ್ಲಿಗೆ ಹೋದರು. ಆದರೆ ಆಶ್ರಮವನ್ನೇನೂ ಸ್ಥಾಪಿಸಲಿಲ್ಲ. ಬದಲಿಗೆ ಆಧ್ಯಾತ್ಮಿಕ ಶಿಬಿರ ನಡೆಸಿದರು.

ಶಾಂತಿ ಆಶ್ರಮದ ಹವಾ ತೀರ ಅತಿರೇಕದ್ದು. ಆ ಕಲ್ಲು ಮುಳ್ಳುಗಳ ಕಗ್ಗಾಡಿಗೆ 'ಶಾಂತಿ ಆಶ್ರಮ' ಎಂದು ಹೆಸರು ಕೊಟ್ಟು, ತಾವೂ ದೈಹಿಕ ಶ್ರಮ ಪಟ್ಟು, ತಮ್ಮ ಶಿಷ್ಯರಿಗೂ ನೀಡಿ—ಅಂತಹ ಶ್ರಮ ಅನುಭವಿಸಲು ಹತ್ತು ಹನ್ನೆರಡು ಜನ ಸದಾ ಸಿದ್ಧವಾಗಿರುತ್ತಿದ್ದರು! —ಸುಮಾರು ಹದಿನೈದು ತಿಂಗಳು ಕಾಲ ಸ್ವಾಮಿ ತುರೀಯಾನಂದರು ಅಲ್ಲಿದ್ದರು. ಒಮ್ಮೆ ಅಲ್ಲಿಗೆ ಭೇಟಿ ಕೊಟ್ಟಿರುವ ಈ ಲೇಖಕ ಅವರೆಲ್ಲ ಅಲ್ಲಿ ಹೇಗಿದ್ದರು ಎಂಬುದನ್ನು ಅರ್ಥ ಮಾಡಿಕೊಳ್ಳದೆ ದಿಗ್ಭ್ರಾಂತನಾಗಿಯೇ ಉಳಿದಿದ್ದಾನೆ! ಅಲ್ಲಿಗೆ ಬರುತ್ತಿದ್ದವರೆಲ್ಲ ಟೆಂಟುಗಳಲ್ಲೇ ವಾಸಿಸುತ್ತಿದ್ದರು. ಅಲ್ಲಿನ ಮೂಲನಿವಾಸಿಗಳೆಲ್ಲ ಈ ವೇದಾಂತ ಸಾಧಕರಿಗೆ ಆಗಾಗ ತೊಂದರೆ ಕೊಡುತ್ತಾ ಉದ್ದಕ್ಕೂ ಅವರ ಸಹ-ವಾಸಿಗಳಾಗಿಯೇ ಉಳಿದರು. ಮೂಲನಿವಾಸಿಗಳು ಯಾರೆಂದರೆ: 'ಸಸ್ಯಾಹಾರಿಗಳಾದ ಮೊಲಗಳು, ಗಫರ್‌ಗಳು (ಈ ಪದಕ್ಕೆ ನೆಲ ಅಳಿಲು, ಹೆಗ್ಗಣ, ನೆಲ ಆಮೆ ಎಂಬ ಅರ್ಥಗಳಿವೆ), ಜಿಂಕೆಗಳು, ಲಾವಕ್ಕಿ (ಒಂದು ಬಗೆಯ ಹಕ್ಕಿ)ಗಳು ಮತ್ತು ಮಾಂಸಾಹಾರಿಗಳಾದ ರ್‍ಯಾಟ್ಲ್ ಸ್ನೇಕ್ ಎಂಬ ವಿಷಸರ್ಪಗಳು, ಕಯೋಟಿ ಎಂಬ ಚಿಕ್ಕ ತೋಳಗಳು ಮತ್ತು ಪರ್ವತ ಸಿಂಹಗಳು. ಈ ಹಿಂಸ್ರ-ಅಹಿಂಸ್ರ ಪ್ರಾಣಿಗಳಲ್ಲಿ ಅಹಿಂಸಾ ಭಾವನೆಯನ್ನು ಶಾಂತಿ ಆಶ್ರಮದ ಸಾಧಕರು ಮೂಡಿಸಿದ್ದರೋ ಇಲ್ಲವೋ ತಿಳಿಯದು. ಆದರೆ ಅವುಗಳಿಗೆ ಅಂಜದೆ ತಮ್ಮ ಸಾಧನೆಯನ್ನು ಮಾತ್ರ ಮುಂದುವರಿಸಿಕೊಂಡು ಹೋಗುತ್ತಿದ್ದರು. ಮುಂದೆ ಅವರು, ಟೆಂಟುಗಳನ್ನೇ ಪೂರ್ಣವಾಗಿ ಆಶ್ರಯಿಸುವುದು ಕ್ಷೇಮವಲ್ಲ ಎಂದು ಎರಡು ಕ್ಯಾಬಿನ್‌ಗಳನ್ನು ಕಟ್ಟಿದರು. ಒಂದು ಸ್ವಾಮೀಜಿಯ ವಾಸಕ್ಕೆ ಮತ್ತೊಂದು ಸಮೂಹ ಧ್ಯಾನ ಮತ್ತು ತರಗತಿಗಳಿಗೆ. ಈ ಧ್ಯಾನಮಂದಿರವೇ ಆಶ್ರಮಕ್ಕೆ ಸಂಕೇತವಾಗಿತ್ತು. ಅಲ್ಲಿ ಒಂದು ವೇದಿಕೆಯ ಮೇಲೆ ಶ್ರೀರಾಮಕೃಷ್ಣರ ಮತ್ತು ಸ್ವಾಮಿ ವಿವೇಕಾನಂದರ ಭಾವಚಿತ್ರಗಳಿವೆ. ಸ್ವಾಮಿ ತುರೀಯಾನಂದರು ಅಮೆರಿಕೆಯ ವಾಸ್ತವ್ಯದ ತಮ್ಮ ಎರಡು ವರ್ಷಗಳಲ್ಲಿ ಬಹು ಭಾಗವನ್ನು, ಎಂದರೆ ಹದಿನೈದು ತಿಂಗಳುಗಳನ್ನು ಈ ಶಾಂತಿ ಆಶ್ರಮದಲ್ಲಿ ಕಳೆದರು. ಸ್ವಾಮಿ ತುರೀಯಾನಂದರ ಬಲಗೈ ಬಂಟರಾಗಿದ್ದ ಪಶ್ಚಿಮದ ಬ್ರಹ್ಮಚಾರಿ ಗುರುದಾಸರು ಅಲ್ಲಿ ಹತ್ತು ವರ್ಷಗಳಷ್ಟು ಕಾಲ ಇದ್ದು ಸಾಧನೆ ನಡೆಸಿದರು.

೧೯೫೨ರಲ್ಲಿ ಭಾರೀ ಬೆಂಕಿಯೊಂದು ಧಿಡೀರನೆ ಕಾಣಿಸಿಕೊಂಡು ಸಾವಿರಾರು ಎಕರೆ ಭೂಮಿಯಲ್ಲಿನ ಹುಲ್ಲು, ಮರಗಳನ್ನು ಕಬಳಿಸಿ

ಬಿಟ್ಟಿತು, ಜೊತೆಗೆ ಶಾಂತಿ ಆಶ್ರಮದ ಕ್ಯಾಬಿನ್‌ಗಳನ್ನೂ ಕೂಡ— ಒಂದೇ ಒಂದರ ಹೊರತು. ಹಾಗೆ ಉಳಿದುಕೊಂಡಿರುವುದು ಧ್ಯಾನದ ಕ್ಯಾಬಿನ್. ಈ ಅನಾಹುತ ಅಂದಿನ ಸ್ಯಾನ್ ಫ್ರಾನ್ಸಿಸ್ಕೋ ಪತ್ರಿಕೆಗಳ ಮುಖಪುಟ ಸುದ್ದಿಯಾಯಿತು.

ಈಗ ವರ್ಷಕ್ಕೊಮ್ಮೆ ಸ್ಯಾನ್ ಫ್ರಾನ್ಸಿಸ್ಕೋ ಸಂಘದ ಮುಖ್ಯಸ್ಥರಾದ ಪ್ರಬುದ್ಧಾನಂದರು ಭಕ್ತಾದಿಗಳೊಡನೆ ಶಾಂತಿ ಆಶ್ರಮಕ್ಕೆ ಬೆಳಗ್ಗೆ ತೆರಳಿ ಒಂದು ದಿನದ ಆಧ್ಯಾತ್ಮಿಕ ಶಿಬಿರ ನಡೆಸಿ ಸಂಜೆಗೆ ಹಿಂದಿರುಗುತ್ತಾರೆ.

ಟಾಹೋ ಸರೋವರ ಸ್ಯಾನ್ ಫ್ರಾನ್ಸಿಸ್ಕೋದಿಂದ ಸುಮಾರು ೨೩೦ ಮೈಲಿ ದೂರದಲ್ಲಿ ಸಿಯಾರಾ ನೆವಾಡಾ ಪರ್ವತಗಳಲ್ಲಿದೆ. ಸರೋವರದ ಸುತ್ತಳತೆ ೭೦ ಮೈಲಿ. ಅತ್ಯಂತ ಸುಂದರವಾದ ಪರಿಸರ. ೧೯೩೦ರ ದಶಕಗಳಲ್ಲಿ ೨೦೦ ಎಕರೆಗಳಷ್ಟು ಜಾಗವನ್ನು ಕೊಳ್ಳಲಾಯಿತು. ಅಲ್ಲಿ ಪ್ರತಿ ವರ್ಷವೂ ಸ್ಯಾನ್ ಫ್ರಾನ್ಸಿಸ್ಕೋ ವೇದಾಂತ ಸಂಘದ ಮುಖ್ಯಸ್ಥರಾದ ಸ್ವಾಮಿಗಳು ವೇದಾಂತ ಅಧ್ಯಯನ, ಧ್ಯಾನ ಇತ್ಯಾದಿಗಳಿಗಾಗಿ ಶಿಬಿರಗಳನ್ನು ನಡೆಸುತ್ತಾರೆ.



ಸ್ಯಾನ್ ಫ್ರಾನ್ಸಿಸ್ಕೋ ವೇದಾಂತ ಸಂಘದ ಹೊಸ ದೇವಾಲಯ

ಸ್ವಾಮಿ ತ್ರಿಗುಣಾತೀತಾನಂದರು ಕಟ್ಟಿದ ದೇವಾಲಯ ಪೂಜೆ, ಉಪನ್ಯಾಸಗಳು, ತರಗತಿಗಳು, ಸಾಧುಗಳ ವಸತಿ ಇವೆಲ್ಲಕ್ಕೆ ಸಾಲದಾಯಿತು. ಆದುದರಿಂದ ಸ್ವಾಮಿ ಅಶೋಕಾನಂದರು ೧೯೫೯ ರಲ್ಲಿ — ೨೩.೨೩, ವಲೆಹೋ ರಸ್ತೆಯಲ್ಲಿ ಒಂದು **ಹೊಸ ದೇವಾಲಯ**ವನ್ನು ಕಟ್ಟಿಸಿದರು. ಅಲ್ಲಿ ದೇವಾಲಯ, ಮಠ, ಎರಡೂ ಇವೆ. ಆ ಕಟ್ಟಡವೂ ಸಂಘದ ಚಟುವಟಿಕೆಗಳಿಗೆ ಸಾಲದಾಗಿ ಬಂದು ಮೂರು ವರ್ಷಗಳ ಹಿಂದೆ ಅದನ್ನು ವಿಸ್ತರಿಸಲಾಗಿದೆ. ಹಾಗೆ ವಿಸ್ತರಿಸಿದ ಭವ್ಯವಾದ ಕಟ್ಟಡವನ್ನು **ಹೊಸ ದೇವಾಲಯ** ಎಂದೂ (*New Temple*), ಸ್ವಾಮಿ ತ್ರಿಗುಣಾತೀತರು ಕಟ್ಟಿಸಿದ ದೇವಾಲಯ ಸಂಕೀರ್ಣವನ್ನು *Old Temple* ಎಂದೂ ಕರೆಯಲಾಗುತ್ತಿದೆ.

ಹೊಸ ದೇವಾಲಯದ ಸಮೀಪದಲ್ಲಿಯೆ ಸಂನ್ಯಾಸಿನಿಯರ ಮಠ ಇದೆ. ತಮ್ಮ ಜೀವಿತವನ್ನೆಲ್ಲ ಸೇವೆ-ಸಾಕ್ಷಾತ್ಕಾರಗಳಿಗಾಗಿ ನಿವೇದಿಸಿರುವ, ದಕ್ಷರೂ, ದೇಹಶ್ರಮದಿಂದ ಸಂಘಕ್ಕೆ ಸೇರಿದ ಎಲ್ಲ ಸ್ಥಳಗಳನ್ನೂ ಅಚ್ಚುಕಟ್ಟಾಗಿ ನಿರ್ವಹಿಸುತ್ತಿರುವ ಸಂನ್ಯಾಸಿನಿಯರ ಒಂದು ಪುಟ್ಟ ಸೈನ್ಯವೇ ಅಲ್ಲಿ ಸಾಧನನಿರತವಾಗಿದೆ.

ಸ್ಯಾನ್ ಫ್ರಾನ್ಸಿಸ್ಕೋ ವೇದಾಂತ ಸಂಘದ ಕಿರೀಟದ ಹೆಮ್ಮೆಯ ಗರಿಯಾಗಿರುವ ಒಲೀಮಾ ಸಾಧನ ಕೇಂದ್ರದ ವಿಷಯವನ್ನು ಈಗ ತಿಳಿದುಕೊಳ್ಳೋಣ.

ಮೆರಿನ್ ಕೌಂಟಿಯಲ್ಲಿರುವ ಒಂದು ಸಣ್ಣ ಹಳ್ಳಿ ಒಲೀಮ. ಅದು ಸ್ಯಾನ್ ಫ್ರಾನ್ಸಿಸ್ಕೋಗೆ ಸುಮಾರು ೩೦ ಮೈಲಿ ದೂರದಲ್ಲಿದೆ. ಅದರ ಸಮೀಪದ ಟೈಲರ್ ಪಾರ್ಕಿನಲ್ಲಿ ಸ್ವಾಮಿ ವಿವೇಕಾನಂದರು ತಮ್ಮ ಕೆಲವು ಶಿಷ್ಯರೊಂದಿಗೆ ಆಧ್ಯಾತ್ಮಿಕ ಶಿಬಿರ ನಡೆಸಿದ್ದರು. ಅದು ರಾಷ್ಟ್ರೀಯ ಉದ್ಯಾನ. ಅದರ ಸುತ್ತ ಮುತ್ತ, ಸ್ವಾಮಿ ವಿವೇಕಾನಂದರು ಓಡಾಡಿರುವ ಸ್ಥಳದಲ್ಲಿ ಸ್ವಲ್ಪ ಜಾಗವನ್ನು ಕೊಂಡು, ನೀರವ ಏಕಾಂತದಲ್ಲಿ ಧ್ಯಾನ, ಜಪ ತಪ ಅಧ್ಯಯನಗಳನ್ನು ನಡೆಸುವವರಿಗಾಗಿ ಒಂದು ಆಶ್ರಮವನ್ನು ಸ್ಥಾಪಿಸುವ ಬಯಕೆ ಅಶೋಕಾನಂದರದ್ದು. ಅದಕ್ಕಾಗಿ ಅವರು ಜಾಗ ಹುಡುಕುತ್ತಿದ್ದರು. ಅಲ್ಲಿ ಆಗ ಮಾರಾಟಕ್ಕಿದ್ದದ್ದು ಈಗ ಒಲೀಮಾ ಸಾಧನ ಕೇಂದ್ರವಿರುವ ಜಾಗ. ಅದೋ ೨೦೦೦ ಎಕರೆ ವಿಸ್ತೀರ್ಣದ್ದು. ಇಬ್ಬರು ಸೋದರರು ಅದರ ಒಡೆಯರು. ಅವರೋ ಅದರ ಒಂದು ಭಾಗವನ್ನು ಮಾರಲು ಸಿದ್ಧರಿರಲಿಲ್ಲ. ಅಷ್ಟನ್ನೂ ಕೊಳ್ಳೋಣವೆಂದರೆ ಸ್ವಾಮಿಗಳ ಬಳಿ ಒಂದು ಸೆಂಟ್ ಕೂಡ ಇರಲಿಲ್ಲ. ಧೈರ್ಯವಾಗಿ ಕೊಳ್ಳಲು ಮನಸ್ಸು ಮಾಡಿದರು. ಹೇಗೋ ಹಣ ಒದಗಿ ಬಂತು. ೧೯೪೦ರ ದಶಕದಲ್ಲಿ ಕೊಂಡುದು ಆಯಿತು. ಎರಡು ಸಾವಿರ ಎಕರೆ ಕಾಡು, ಒಂದು ಅತ್ಯಂತ ಸೊಗಸಾದ ಮನೆ, ಕೃಷಿ ಉಪಕರಣಗಳನ್ನಿಡುವ ಭಾರೀ ಷೆಡ್ ಇವರದ್ದಾಯಿತು. ಆ ಸೊಗಸಾದ ಮನೆ ಅತಿಥಿಗೃಹವಾಯಿತು. ಅಲ್ಲಿ ಒಂದು ಧ್ಯಾನ ಮಂದಿರ, ಗ್ರಂಥಾಲಯ, ಅಡುಗೆಮನೆ, ಕೆಲವು ಕೊಠಡಿಗಳಿವೆ. ಯಾವುದೇ ಪಂಥದ ಸಾಧಕರಾದರೂ ಬಂದು ಅಲ್ಲಿ ತಂಗಿ ಸಾಧನೆ ಅಧ್ಯಯನಗಳಲ್ಲಿ ತೊಡಗಬಹುದು. ಪುರುಷರು ಅಲ್ಲಿ ಉಳಿದುಕೊಂಡರೆ, ಸ್ವಲ್ಪ ದೂರದಲ್ಲೇ ಮಹಿಳೆಯರು ತಂಗಲು ವಸತಿಗೃಹವಿದೆ. ಈಗ ಸಮೀಪದಲ್ಲೇ ಸಾಧುಗಳು ವಾಸಿಸುತ್ತಾರೆ. ಉಪಕರಣಗಳ ದಾಸ್ತಾನು ಮಾಡುವ ದೊಡ್ಡ ಷೆಡ್ ಅನ್ನು ತಮ್ಮ ಅನುಕೂಲಕ್ಕೆ ತಕ್ಕಂತೆ ಪರಿವರ್ತಿಸಿಕೊಂಡಿದ್ದಾರೆ.

ಅದೊಂದು ನಿಜವಾದ ತಪೋವನ. ನೂರಾರು ಜಿಂಕೆಗಳು— ಕೆಲವು ಬಿಳಿಯವು—ನಿರ್ಭಯವಾಗಿ ಅಲ್ಲಿ ಓಡಾಡುತ್ತಿರುತ್ತವೆ. ನಗರದ ಗಲಿಬಿಲಿಗಳಿಂದ ದೂರವಾಗಿ, ಸದಾ ಶಾಂತಿಯನ್ನು ಸೂಸುತ್ತಾ ಇರುವ ಸ್ಥಳ ಅದು. ಸ್ವಾಮಿ ಅಸಿತಾನಂದ, ಸ್ವಾಮಿ ವೇದಾನಂದ ಮತ್ತು ಬ್ರಹ್ಮಚಾರಿ ವಿಮುಕ್ತ ಚೈತನ್ಯ ಅಲ್ಲಿನ ನಿತ್ಯ ನಿವಾಸಿಗಳು. ಮೂವರೂ ಅಮೆರಿಕನರು, ಸಾಹಸಿಗಳು, ಸದಾ ಸೇವಾತತ್ಪರರು. ಸಂನ್ಯಾಸಿನಿ ಮಠದ ಸದಸ್ಯರು ಆಗಾಗ ಬಂದು ಒಲೀಮಾದ ಆವರಣವನ್ನು ಶುದ್ಧಮಾಡುವುದು ನೆಲವನ್ನು ಹಸನುಗೊಳಿಸುವುದು ಮುಂತಾದ ಕಾರ್ಯಗಳನ್ನು ನೆರವೇರಿಸುತ್ತಾರೆ.



ಒಲೀಮಾ ಸಾಧನ ಕೇಂದ್ರದ ವಿಹಂಗಮ ನೋಟ

ಇಂತಹ ಸುಂದರವಾದ ಹಸುರು ಶಾಂತಿಧಾಮ ಸ್ಯಾನ್ ಫ್ರಾನ್ಸಿಸ್ಕೋ ಸಂಘದ ಕೈತಪ್ಪಿಹೋಗುವ ಸಂದರ್ಭ ಒದಗಿತ್ತು. ಕ್ಯಾಲಿಫೋರ್ನಿಯಾ ಸರ್ಕಾರ ಅದನ್ನು ರಾಜ್ಯದ ಉದ್ಯಾನವನ ಎಂದು ಘೋಷಿಸುವ ಸಂದರ್ಭ ಒದಗಿತ್ತು. ಸ್ವಾಮಿ ಅಶೋಕಾನಂದರ, ಅವರ ಸಹಾಯಕರಾಗಿದ್ದ ಅಮೆರಿಕನ್ ಸ್ವಾಮಿ ಚಿದ್ರೂಪಾನಂದರ ಮಹಾ ಸಾಹಸದಿಂದ ಅಮೆರಿಕದ ಕೇಂದ್ರ ಸರ್ಕಾರ ಒಂದು ಶಾಸನ ಮಾಡಿ ಅದು ವೇದಾಂತ ಸಂಘದ ವಶದಲ್ಲೇ ಇರತಕ್ಕದ್ದು ಎಂದು ತೀರ್ಮಾನಿಸಿತು. ಅದರದ್ದೇ ಒಂದು ಸಾಹಸ ಕಥೆ.

ಪ್ರತಿ ವರ್ಷ ಮೇ ತಿಂಗಳಲ್ಲಿ ಅಲ್ಲಿ ಐದು ದಿನಗಳ ಆಧ್ಯಾತ್ಮಿಕ ಶಿಬಿರ ನಡೆಯುತ್ತದೆ. ಅದರ ಭಾಗವಾಗಿ ಯುವಕರಿಗೆ ಆಧ್ಯಾತ್ಮಿಕ ಮೌಲ್ಯಗಳನ್ನು ಪರಿಚಯ ಮಾಡಿಸಿಕೊಡುವ ಒಂದು ಕಾರ್ಯಕ್ರಮವಿರುತ್ತದೆ. ಈಚೆಗೆ ಪ್ರತಿವರ್ಷವೂ ಯುವಕರಿಗೆ ನೈತಿಕ ಮತ್ತು ಆಧ್ಯಾತ್ಮಿಕ ಶಿಕ್ಷಣವನ್ನು ನೀಡುವ ಶಿಬಿರವೂ ನಡೆಯುತ್ತಿದೆ. ಈ ವರ್ಷ ಸ್ಯಾನ್ ಫ್ರಾನ್ಸಿಸ್ಕೋ ವೇದಾಂತ ಸಂಘದ ಶತಮಾನೋತ್ಸವ ಆಚರಣೆಯ ಅಂಗವಾಗಿ ಮೇ ೨೭ರಿಂದ ೩೧ರವರೆಗೆ ಐದು ದಿನಗಳ ಶಿಬಿರ ನಡೆಯಿತು. 'ನಮಗೆ ಸಾಮಾನ್ಯವಾದ ಆಧ್ಯಾತ್ಮಿಕ ನೆಲೆ' ಎಂಬ ವಿಷಯವನ್ನು ಕುರಿತಂತೆ ಯಹೂದಿ, ಸೂಫಿ, ಕ್ರೈಸ್ತ, ಬೌದ್ಧ ಧರ್ಮ ಗುರುಗಳು ಮಾತನಾಡಿದರು. ಹಾಗೂ ವೇದಾಂತವನ್ನು ಕುರಿತಂತೆ ಪ್ರವಚನಗಳೂ ಚರ್ಚೆಗಳೂ ನಡೆದುವು. ಕೊನೆಯ ದಿನ ೨೦೦ಕ್ಕೂ ಹೆಚ್ಚು ಭಕ್ತರು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

ಹೀಗೆ ಸ್ಯಾನ್ ಫ್ರಾನ್ಸಿಸ್ಕೋ ವೇದಾಂತ ಸಂಘವು ಸ್ವಾಮಿ ಪ್ರಬುದ್ಧಾನಂದ, ಬ್ರಹ್ಮಚಾರಿ ತ್ಯಾಗೀಶ ಚೈತನ್ಯ (ಪೂರ್ವಾಶ್ರಮದಲ್ಲಿ ಗ್ರೆಗ್), ಸ್ವಾಮಿ ಅಸಿತಾನಂದ, ಸ್ವಾಮಿ ವೇದಾನಂದ, ಬ್ರಹ್ಮಚಾರಿ ವಿಮುಕ್ತ ಚೈತನ್ಯ ಈ ಇಷ್ಟು ಜನರಿಂದ ಕೂಡಿದ್ದು, ಸದ್ದುಗದ್ದಲಗಳಿಲ್ಲದೆ ಅಮೆರಿಕದ ಆ ಸುಂದರ ಭಾಗದಲ್ಲಿ ವೇದಾಂತ ಪ್ರಚಾರ ಕಾರ್ಯದಲ್ಲಿ ತೊಡಗಿದೆ. ✦

# ನನ್ನ ಗುರುದೇವ ಸ್ವಾಮಿ ರಾಮಕೃಷ್ಣಾನಂದ

ಸ್ವಾಮಿ ಚಿದ್ಘನಾನಂದೇಂದ್ರ ಸರಸ್ವತಿ

ಸ್ವಾಮಿ ಚಿದ್ಘನಾನಂದೇಂದ್ರ ಸರಸ್ವತಿಯವರು ಸ್ವಾಮಿ ರಾಮಕೃಷ್ಣಾನಂದಜಿಯವರೊಡನೆ ೧೨ ವರ್ಷ ಇದ್ದು ಸೇವೆಗೈಯುವ ಅವಕಾಶವನ್ನು ಪಡೆದವರು. ತೆಲುಗು ಭಾಷೆಯಲ್ಲಿ ಪ್ರಕಟವಾಗಿದ್ದ ಅವರ ನೆನಪುಗಳ ಕೆಲವು ತುಣುಕುಗಳು ಇವು. ಜುಲೈ ತಿಂಗಳ ೨೯ರಂದು ಸ್ವಾಮಿ ರಾಮಕೃಷ್ಣಾನಂದರ ಜಯಂತಿ ಉತ್ಸವ.

ಸ್ವಾಮಿ ರಾಮಕೃಷ್ಣಾನಂದರದು ಎತ್ತರದ ನಿಲುಗಟ್ಟು, ಕಟ್ಟುಮಸ್ತಿನ ದೇಹ, ಹೊಂಬಣ್ಣದ ಮೈಬಣ್ಣ ಮತ್ತು ವಿಶಾಲವಾದ, ಪ್ರಶಾಂತತೆಯನ್ನು ಹೊರಸೂಸುತ್ತಿರುವ ವದನ. ಆಧ್ಯಾತ್ಮಿಕ ಜ್ಯೋತಿಯಿಂದ ಪ್ರಜ್ವಲಿಸುತ್ತಿದ್ದವು ಅವರ ಕಣ್ಣುಗಳು.

ಚೆನ್ನೈನಲ್ಲಿ ಸ್ವಾಮಿ ರಾಮಕೃಷ್ಣಾನಂದರು ತಮ್ಮ ಕಾರ್ಯವನ್ನು ಆರಂಭಿಸಿದ್ದು ೧೮೯೭ರಲ್ಲಿ. ಸುಮಾರು ಹನ್ನೆರಡು ವರ್ಷಗಳ ಕಾಲ, ಅಂದರೆ ೧೮೯೮ರಿಂದ ೧೯೧೧ರ ಕಡೆಯ ಭಾಗದವರೆಗೂ ಅವರು ಅಲ್ಲಿದ್ದರು. ಅವರು ನಡೆಸುತ್ತಿದ್ದ ತರಗತಿಗಳಿಗೆ ನಾನು ತಪ್ಪದೆ ಹೋಗುತ್ತಿದ್ದೆ. ಭಕ್ತರ ಕೋರಿಕೆಯ ಮೇರೆಗೆ, ಸ್ವಾಮಿಗಳು ದಿನವೂ ನಗರದ ವಿವಿಧ ಪ್ರದೇಶಗಳಿಗೆ ಭೇಟಿ ಕೊಡುತ್ತಿದ್ದರು. ಅಲ್ಲಿ ಬೆಳಗ್ಗೆ ಮತ್ತು ಸಂಜೆ— ಎರಡು ಹೊತ್ತೂ ಒಂದೂವರೆ ಘಂಟೆಯಿಂದ ಎರಡು ಘಂಟೆಗಳ ಕಾಲ ಮಾತನಾಡುತ್ತಿದ್ದರು.

ಸ್ವಾಮಿ ರಾಮಕೃಷ್ಣಾನಂದರು ಬಂಗಾಳಿಗಳು. ದಕ್ಷಿಣ ಪ್ರಾಂತದ ಭಾಷೆಗಳಾವುದನ್ನೂ ಅರಿತವರಲ್ಲ. ಆಂಗ್ಲ ಭಾಷೆಯಲ್ಲಿ ಮಾತ್ರ ಮಾತನಾಡುತ್ತಿದ್ದರು. ಸಮಾಜದ ವಿವಿಧ ಸ್ತರಗಳಿಂದ ಬಂದ ಹಾಗೂ ವಿವಿಧ ಜಾತಿ-ಪಂಗಡಗಳಿಗೆ ಸೇರಿದ ಜನರು ಅವರ ತರಗತಿಗಳಿಗೆ ಬಂದು ಅವುಗಳಿಂದ ಪ್ರಯೋಜನ ಪಡೆಯುತ್ತಿದ್ದರು. ಸರಳವಾದ ಸ್ಪಷ್ಟವಾದ ಭಾಷೆಯಲ್ಲಿ ಮಾತನಾಡುತ್ತಿದುದರಿಂದ, ಆಂಗ್ಲ ಭಾಷೆಯಲ್ಲಿ ಅಷ್ಟು ಪರಿಣತರಲ್ಲದವರೂ ಅವರ ಮಾತನ್ನು ಸುಲಭವಾಗಿ ಅರ್ಥಮಾಡಿಕೊಳ್ಳಬಹುದಾಗಿತ್ತು. ಅವರ ತರಗತಿಗಳಲ್ಲಿ ನಿಯಮಿತವಾಗಿ ಉಪಸ್ಥಿತರಾಗುತ್ತಿದ್ದವರಲ್ಲಿ ನಾನೂ ಒಬ್ಬ. ಆ ಪ್ರವಚನಗಳು ನನ್ನ ಮನಸ್ಸಿನಲ್ಲಿ ಅಳಿಸಲಾಗದ ಮುದ್ರೆಯನ್ನೊತ್ತಿದೆ. ಹಾಗೂ, ಎಂದಿಗೂ ಬದಲು ಮಾಡಲಾಗದ ಅಥವಾ ನಾಶ ಮಾಡಲಾಗದ, ಮಾನಸಿಕ ಪರಿವರ್ತನೆಯನ್ನು ತಂದಿದೆ. ಇದನ್ನು ನಾನು ನ್ಯಾಯಯುತವಾದ ಹೆಮ್ಮೆಯಿಂದ ಹೇಳಿಕೊಳ್ಳುತ್ತಿದ್ದೇನೆ.

ತಮ್ಮ ಪ್ರವಚನಗಳಲ್ಲಿ ರಾಮಕೃಷ್ಣಾನಂದರು ಹಲವಾರು ಸಾಧುಸಂತರು, ಋಷಿಮುನಿಗಳು ಬೋಧಿಸಿದ ಆದರ್ಶಗಳ ಬಗ್ಗೆ ವಿಚಾರ ಮಾಡುತ್ತಿದ್ದರು. ಅಗಾಧವಾದ ಅಂತರ್ದೃಷ್ಟಿಯನ್ನಿಟ್ಟುಕೊಂಡು ಮಾತನಾಡುತ್ತಿದ್ದರವರು. ಅವರದು ಬಹು ಉದಾರವಾದ ವಿಶಾಲವಾದ ದೃಷ್ಟಿಕೋನ. ಪ್ರೇಮಪೂರಿತವಾಗಿತ್ತು ಅವರ ನುಡಿಗಳು. ಧಾರ್ಮಿಕ ಸಹಿಷ್ಣುತೆಯನ್ನು ಪ್ರತಿಪಾದಿಸುತ್ತಿದ್ದರವರು. ಅವರ ಮಾತುಗಳನ್ನಾಲಿಸುತ್ತಿದ್ದವರು ಉನ್ನತ ಆಧ್ಯಾತ್ಮಿಕ ಸ್ತರಗಳಿಗೆ ಒಯ್ಯಲ್ಪಡುತ್ತಿದ್ದರು.

ಭಕ್ತರ ಮೇಲೆ ಅವರು ತೋರುತ್ತಿದ್ದ ಪ್ರೀತಿ ಅಸದಳ. ಅದು